## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಧನುರ್ಮಾಸ** | **2** |
| **ಧನುರ್ಮಾಸ ಎಂದರೇನು?** | **3** |
| **ಧನುರ್ಮಾಸದ ಪೂಜಾಕಾಲ ಎಂದು ಆರಂಭ** | **3** |
| **ಧನುರ್ಮಾಸದ ಪ್ರಧಾನ ನಿಯಮಗಳು** | **5** |
| **ಧನುರ್ಮಾಸದ ಪೂಜೆ** | **6** |
| **ಚಳಿಯಲ್ಲಿ ಸ್ನಾನ ಮಾಡುವದು ಹೇಗೆ?** | **8** |
| **ಧನುರ್ಮಾಸದಲ್ಲಿ ಸ್ನಾನದ ಸಮಯ** | **11** |
| **ಪೂಜಾ ಸಮಯ** | **13** |
| **ಅರುಣೋದಯದ ಪೂಜೆಯೇ ಏಕೆ ಮುಖ್ಯ** | **15** |
| **ಧನುರ್ಮಾಸದ ಪೂಜೆ ಮಾಡದಿದ್ದಲ್ಲಿ ದೋಷ** | **16** |
| **ಪೂಜೆಯ ಅಧಿಕಾರವಿಲ್ಲದವರು ಏನು ಮಾಡಬೇಕು** | **19** |
| **ಪೂಜೆಯಿಂದ ದೊರೆಯುವ ಫಲಗಳು** | **20** |
| ಶತ್ರುನಾಶ | 20 |
| ದೀರ್ಘಾಯುಷ್ಯ, ಮಹಾಸಂಪತ್ತು | 21 |
| ಸಕಲಾಭೀಷ್ಟಗಳ ಪ್ರಾಪ್ತಿ, ಸದಾ ವೈಷ್ಣವಜನ್ಮ | 23 |
| ಹರಿಯ ಪ್ರೀತಿ, ಮೋಕ್ಷ | 24 |

# ವಿಶ್ವನಂದಿನಿ ಲೇಖನಮಾಲೆ – 256

## ಧನುರ್ಮಾಸ

ಭಕ್ತರ ಮೇಲೆ ಶ್ರೀಹರಿ ತೋರುವಂತಹ ವಿಧವಿಧ ಕಾರುಣ್ಯದ ರೂಪಗಳಲ್ಲಿ ಒಂದು ಧನುರ್ಮಾಸದ ಪೂಜೆ.

ಕಾರಣ, ಒಂದು ದಿವಸದ ಪೂಜೆಯಿಂದ ಸಾವಿರ ವರ್ಷಗಳ ಪೂಜಾಫಲವನ್ನು ನೀಡಿ, ಒಮ್ಮೆ ಹುಗ್ಗಿಯ ನೈವೇದ್ಯದಿಂದ ಅಪಾರ ಪಾಪಗಳ ನಾಶವನ್ನು ಮಾಡಿ, ಭಕ್ತರ ದಾರಿದ್ರ್ಯವನ್ನು ಕಳೆಯುವ, ಆಪತ್ತುಗಳನ್ನು ಪರಿಹರಿಸುವ ಕಾರುಣ್ಯವನ್ನು ಶ್ರೀಹರಿ ಧನುರ್ಮಾಸದಲ್ಲಿ ತೋರುತ್ತಾನೆ.

## ಧನುರ್ಮಾಸ ಎಂದರೇನು?

ಹನ್ನೆರಡು ರಾಶಿಗಳಲ್ಲಿ ಒಂಭತ್ತನೆಯ ರಾಶಿ ಧನೂರಾಶಿ. ಸೂರ್ಯ ಈ ರಾಶಿಯನ್ನು ಪ್ರವೇಶ ಮಾಡಿ, ಈ ರಾಶಿಯನ್ನು ಬಿಡುವವರೆಗಿನ ಕಾಲ ಧನುರ್ಮಾಸ ಎಂದು ಕರೆಸಿಕೊಳ್ಳುತ್ತದೆ.

## ಧನುರ್ಮಾಸದ ಪೂಜಾಕಾಲ ಎಂದು ಆರಂಭ

ಯಾವ ದಿವಸ ಸೂರ್ಯೋದಯದಲ್ಲಿ ಸೂರ್ಯ ಧನೂರಾಶಿಯಲ್ಲಿರುತ್ತಾನೆಯೊ ಆ ದಿವಸದಿಂದಲೇ ಪೂಜೆ ಆರಂಭ.

ಉದಾಹರಣೆಗೆ, ಸೂರ್ಯ ಮಂಗಳವಾರ ಮಧ್ಯಾಹ್ನ ಧನೂರಾಶಿಗೆ ಪ್ರವೇಶ ಮಾಡಿದ್ದಾನೆ ಎಂದಿಟ್ಟುಕೊಳ್ಳಿ. ಪೂಜೆ ಬುಧವಾರದಿಂದ ಆರಂಭ.

ಕಾರಣ, ಮಂಗಳವಾರದ ಸೂರ್ಯೋದಯದಲ್ಲಿ ಸೂರ್ಯ ಇನ್ನೂ ವೃಶ್ಚಿಕರಾಶಿಯಲ್ಲಿಯೇ ಇದ್ದ. ಮಂಗಳವಾರ ಮಧ್ಯಾಹ್ನ ಧನೂರಾಶಿಯನ್ನು ಪ್ರವೇಶಿಸಿದ್ದರಿಂದ ಬುಧವಾರದ ಸೂರ್ಯೋದಯದಲ್ಲಿ ಸೂರ್ಯ

ಧನೂರಾಶಿಯಲ್ಲಿದ್ದಾನೆ. ಹೀಗಾಗಿ ಬುಧವಾರದಿಂದ ಧನುರ್ಮಾಸದ ಪೂಜೆ ಆರಂಭ.

ಹೀಗೆಯೇ ಅಂತ್ಯ. ಮಂಗಳವಾರ ರಾತ್ರಿ ಐದು ಗಂಟೆಗೆ ಸೂರ್ಯ ಧನೂರಾಶಿಯನ್ನು ಬಿಟ್ಟು ಮಕರವನ್ನು ಸೇರಿದ್ದಾನೆ ಎಂದಿಟ್ಟುಕೊಳ್ಳಿ. ಆಗ ಮಂಗಳವಾರವೇ ಧನುರ್ಮಾಸದ ಪೂಜೆ ಸಮಾಪ್ತವಾಗುತ್ತದೆ. ಬುಧವಾರದ ದಿವಸ ಧನುರ್ಮಾಸದ ಪೂಜೆ ಇರುವದಿಲ್ಲ[1].

---

[1] ರಾತ್ರಿ ಹನ್ನೆರಡು ಗಂಟೆಗೆ ವಾರ ಬದಲಾಗುವ ಇಂಗ್ಲೀಷರ ಲೆಕ್ಕ ತೆಗೆದುಕೊಳ್ಳಬೇಡಿ. ನಮ್ಮ ವೈದಿಕಲೆಕ್ಕದ ಪ್ರಕಾರ ಸೂರ್ಯೋದಯದಿಂದ ಸೂರ್ಯೋದಯಕ್ಕೆ ವಾರಗಳು ಆರಂಭ ಅಂತ್ಯವಾಗುತ್ತವೆ. ಸೂರ್ಯೋದಯದ ವರೆಗೆ ಹಿಂದಿನ ವಾರ. ಸೂರ್ಯೋದಯದಿಂದ ಮುಂದೆ ಮುಂದಿನ ವಾರ. ಮತ್ತು ಸೂರ್ಯೋದಯದ ಹಿಂದಿನ ಎರಡು ಗಂಟೆಗಳನ್ನು ಮುಂದಿನ ವಾರದ ಬೆಳಗಿನ ಜಾವ ಎನ್ನುತ್ತಾರೆ. ಅಂದರೆ ಮಂಗಳವಾರ ರಾತ್ರಿ ಐದು ಗಂಟೆ, ಬುಧವಾರದ ಬೆಳಗಿನ ಜಾವ

## ಧನುರ್ಮಾಸದ ಪ್ರಧಾನ ನಿಯಮಗಳು

ಧನುರ್ಮಾಸದಲ್ಲಿ ಒಟ್ಟು ಮೂರು ನಿಯಮಗಳು.

1. ಸೂರ್ಯೋದಯಕ್ಕಿಂತ ಮುಂಚೆಯೇ ಸಮಗ್ರ ದೇವರ ಪೂಜೆ ಮುಗಿಯಬೇಕು.

2. ದೇವರ ಪೂಜೆಯಲ್ಲಿ ಕಡ್ಡಾಯವಾಗಿ ಹುಗ್ಗಿಯ ನೈವೇದ್ಯವನ್ನು ಸಮರ್ಪಿಸಬೇಕು.

3. ಸೂರ್ಯೋದಯದ ನಂತರ ಆದಷ್ಟು ಬೇಗ ಊಟವನ್ನೂ ಮುಗಿಸಬೇಕು.

## ಧನುರ್ಮಾಸದ ಪೂಜೆ

ಸೂರ್ಯ ಧನೂರಾಶಿಯಲ್ಲಿದ್ದಾಗ ಸೂರ್ಯೋದಯಕ್ಕಿಂತ ಮುಂಚೆ ಉಷಃಕಾಲದಲ್ಲಿ ಪೂಜೆ ಮಾಡಿದರೆ ಒಂದು ಸಾವಿರ ವರ್ಷದ ಪೂಜಾಫಲವನ್ನು ಭಗವಂತ ನೀಡುತ್ತಾನೆ ಎಂದು ಪಂಚರಾತ್ರಸಂಹಿತೆ ತಿಳಿಸುತ್ತದೆ —

**ಕೋದಂಡಸ್ಥೇ ಸವಿತರಿ**
**ಪ್ರತ್ಯೂಷೇ ಪೂಜನಾದ್ಧರೇಃ ।**
**ಸಹಸ್ರಾಬ್ದಾರ್ಚನಫಲಂ**
**ದಿನೇನೈಕೇನ ಲಭ್ಯತೇ ।**

ಒಂದು ದಿವಸದ ಪೂಜೆಗೆ ಒಂದು ಸಾವಿರವರ್ಷದ ಫಲ.

ಇಷ್ಟು ಮಹತ್ತರವಾದ ಫಲ ದೊರೆಯಲು ಮುಖ್ಯ ಕಾರಣ, ಕಲಿಯುಗ ಮತ್ತು ಚಳಿಗಾಲ.

ಮೊದಲಿಗೆ ಕಲಿಗಾಲದಲ್ಲಿ ಮಾಡುವ ಸತ್ಕರ್ಮಗಳಿಗೆ ಇತರ ಯುಗಗಳಿಗಿಂತ ಹೆಚ್ಚಿನ ಫಲ ದೊರೆಯುತ್ತದೆ. ಕಾರಣ, ಈ ಯುಗದಲ್ಲಿ

ಸಾಧನೆ ಮಾಡಲು ಅನುಕೂಲವಾದ ವಾತಾವರಣವೂ ಇರುವದಿಲ್ಲ, ಪರಿಕರಗಳೂ ಇರುವದಿಲ್ಲ ಮತ್ತು ಮನಸ್ಸೂ ಇರುವದಿಲ್ಲ.

ಅದರಲ್ಲಿಯೂ ಧನುರ್ಮಾಸದ ಚಳಿ. ಕೆಲವು ಪ್ರದೇಶಗಳಲ್ಲಿ ಚಳಿ ಇಲ್ಲದೇ ಇದ್ದರೂ ಬಹುತೇಕ ಪ್ರದೇಶಗಳಲ್ಲಿ ಮೂಳೆ ಕೊರೆಯುವಂತಹ ಚಳಿ ಇರುತ್ತದೆ. ಏಳುವದೇ ಕಷ್ಟ. ಎದ್ದರೂ ಸ್ನಾನ ಮಾಡುವದು ಕಷ್ಟ. ಬಿಸಿನೀರಿನಲ್ಲಿ ಸ್ನಾನ ಮಾಡಬಹುದಾದರೂ ತಣ್ಣೀರಿನ ಸ್ನಾನ ಅತ್ಯಂತ ಕಷ್ಟ. ಅದನ್ನು ಮಾಡಿ ಪೂಜೆ ಮಾಡಿದಲ್ಲಿ ಒಂದು ಸಾವಿರ ವರ್ಷದ ಪೂಜಾಫಲ ನಿಶ್ಚಿತವಾಗಿ ದೊರೆಯುತ್ತದೆ.

ದೇವರ ಪರಮಾನುಗ್ರಹದಿಂದ ಪ್ರತೀವರ್ಷವೂ ದೊರೆಯುವ ಈ ಶ್ರೇಷ್ಠ ಅವಕಾಶವನ್ನು ಸರ್ವಥಾ ತಪ್ಪಿಸಿಕೊಳ್ಳಬಾರದು.

## ಚಳಿಯಲ್ಲಿ ಸ್ನಾನ ಮಾಡುವದು ಹೇಗೆ?

ಶ್ರೀಮಧ್ವವಿಜಯದ ಆರನೆಯ ಸರ್ಗದಲ್ಲಿ ಇದನ್ನು ವಿವರಿಸಿದ್ದೇನೆ.

ಶ್ರೀಮದಾಚಾರ್ಯರನ್ನು ನಂಬಿದಲ್ಲಿ ಯಾವುದೂ ಅಸಾಧ್ಯವಲ್ಲ. ಆಚಾರ್ಯರು ಸರ್ವವನ್ನೂ ಕರುಣಿಸುವ ಕಾಮಧೇನು.

ಆಚಾರ್ಯರು ಶ್ರೀ ವೇದವ್ಯಾಸದೇವರ ಕಾರುಣ್ಯವನ್ನು ಅಪೇಕ್ಷಿಸುತ್ತ ಬದರಿಯಲ್ಲಿ ನಲವತ್ತೆಂಟು ದಿವಸಗಳ ಕಾಲ ಕಾಷ್ಠಮೌನವ್ರತ, ಉಪವಾಸವ್ರತಗಳನ್ನು ಆರಂಭಿಸುತ್ತಾರೆ. ಅಲಕನಂದೆಯ ಆ ಪರಮಶೀತಲ ನೀರಿನಿಲ್ಲಿ ಸೂರ್ಯೋದಯಕ್ಕಿಂತ ಒಂದೂವರೆ ಗಂಟೆ ಮುಂಚೆ ಸ್ನಾನ ಮಾಡುತ್ತಿರುತ್ತಾರೆ.

ಯಾವ ಗಂಗೆಯ ನೀರನ್ನು ಯಾವ ಸಮಯದಲ್ಲಿ ಮುಟ್ಟಲೂ ಸಾಧ್ಯವಿಲ್ಲವೋ ಆ ಸಮಯದಲ್ಲಿ ಅಲಕನಂದೆಯಲ್ಲಿ ಆಚಾರ್ಯರು ಮುಳುಗು ಹಾಕಿ ಸ್ನಾನ ಮಾಡಿ ಆಹ್ನೀಕಗಳನ್ನು ಮಾಡುತ್ತಿರುತ್ತಾರೆ.

**ಮಜ್ಜನಂ ವ್ಯಧಿತ ಶೀತಲಗಂಗಾ-**
**ವಾರಿ ನಿತ್ಯಮರುಣೋದಯಕಾಲೇ |**
**ಯತ್ ಸ್ಪೃಶಂತಿ ನ ನರಾ ಹಿಮಭೀತಾ**
**ಅಂಶ ಏಷ ಪೃಷತಾಮಧಿಪಸ್ಯ|**

ನೀರು ತಣ್ಣಗಾಗುವದೇ ಗಾಳಿಯಿಂದ. ಆ ಗಾಳಿಯ ಅವತಾರರಾದ ಆಚಾರ್ಯರಿಗೆ ಈ ಕಾರ್ಯ ಸರ್ವಥಾ ಅಸಾಧ್ಯವಲ್ಲ, ಅವರ ದೃಷ್ಟಿಯಿಂದ ಆಶ್ಚರ್ಯವೇ ಅಲ್ಲ.

ಆದರೆ ಅವರ ಈ ಚರ್ಯೆಯನ್ನು ಶ್ರೀ ಮಧ್ವವಿಜಯದಲ್ಲಿ ದಾಖಲಿಸಲಿಕ್ಕೆ ಕಾರಣ, ಇದನ್ನು ನಾವು ಚಿಂತನೆ ಮಾಡುವದರಿಂದ ಅತ್ಯಂತ ದುರ್ಬಲವಾದ ನಮ್ಮ ದೇಹಕ್ಕೆ ಬೆಳಗಿನ ಜಾವ ಸ್ನಾನ ಮಾಡುವ ಶಕ್ತಿ ಬರುತ್ತದೆ. ನನ್ನ ವೈಯಕ್ತಿಕ ಅನುಭವವಿದು.

ಮಧ್ವವಿಜಯವನ್ನು ಓದುವ ಮುನ್ನ ಚಳಿಯಲ್ಲಿ ಸ್ನಾನ ಮಾಡುವಾಗ ಮೈಗೆ ಮುಳ್ಳು ಚುಚ್ಚಿದಂತಾಗುವ ಅನುಭವವಾಗಿದೆ. ಆದರೆ

ಆಚಾರ್ಯರ ಸ್ಮರಣೆಯಿಂದ ಸ್ನಾನ ಮಾಡಲು ಆರಂಭಿಸಿದ ನಂತರ ಆ ಅನುಭವವೇ ಆಗಿಲ್ಲ. ಎಷ್ಟೆ ಚಳಿಯಿದ್ದರೂ ಆಚಾರ್ಯರ ಸ್ಮರಣೆಯ ನಂತರ ಮುಳುಗೇಳುವ ಶಕ್ತಿ ಬಂದುಬಿಡುತ್ತದೆ. ಅತ್ಯಂತ ಕ್ಷುದ್ರರಾದ ನಮ್ಮಂತಹವರ ಕ್ಷುದ್ರಾತಿಕ್ಷುದ್ರ ಸಮಸ್ಯೆಗಳನ್ನೂ ಪರಿಹರಿಸುವ ಆಚಾರ್ಯರನ್ನು ಪಡೆದ ನಾವು ಪರಮಭಾಗ್ಯವಂತರು.

ಮೇಲಿನ ಮಧ್ವವಿಜಯದ ಶ್ಲೋಕದ ವಿವರಣೆಯ ಲಿಂಕನ್ನು ನೀಡಿದ್ದೇನೆ. ತಪ್ಪದೇ ಕೇಳಿ.

Upanyasa - VNU255 MV55
ಶ್ರೀಮದಾಚಾರ್ಯರು ಮಾಡಿದ ತಪಸ್ಸು

## ಧನುರ್ಮಾಸದಲ್ಲಿ ಸ್ನಾನದ ಸಮಯ

ಸೂರ್ಯೋದಯದ ಒಳಗೆ ಸಮಗ್ರ ಪೂಜೆ ಮುಗಿಯಬೇಕು. ಪೂಜೆಗೆ ಸಾಮಾನ್ಯ ಒಂದು ಅಥವಾ ಒಂದೂವರೆಗಂಟೆ ಸಮಯ ಬೇಕು.

ಧನುರ್ಮಾಸದಲ್ಲಿ ಸಾಮಾನ್ಯವಾಗಿ 6-30ರ ಸುಮಾರಿಗೆ ಸೂರ್ಯೋದಯವಾಗುತ್ತದೆ. ಅಂದರೆ ಐದು ಗಂಟೆಗೆ ಪೂಜೆ ಆರಂಭವಾಗಬೇಕು.

ಸಂಧ್ಯಾವಂದನೆ ಮತ್ತು ಪೂಜೆಯ ಸಿದ್ಧತೆಗೆ ಅರ್ಧ ಗಂಟೆ ಬೇಕು.

ಅಂದರೆ ನಾಲ್ಕೂವರೆಗೆ ಸ್ನಾನ ಮುಗಿದಿರಬೇಕು.

ಅಂದರೆ ಮೂರೂವರೆಗೆ ಎದ್ದರೆ ಶೌಚ, ದಂತಧಾವನ, ಪ್ರಾತಃಸ್ತೋತ್ರಗಳ ಪಠಣವನ್ನು ಮುಗಿಸಿ ನಾಲ್ಕೂ ಕಾಲಿಗೆ ಸ್ನಾನಕ್ಕೆ ಹೋಗಬಹುದು.

ಹೆಣ್ಣುಮಕ್ಕಳೂ ಸಹ ಅಷ್ಟು ಹೊತ್ತಿಗೇ ಸ್ನಾನ ಮುಗಿಸಿ ದೇವರ ನೈವೇದ್ಯಕ್ಕೆ ಹುಗ್ಗಿಯನ್ನು ತಯಾರು ಮಾಡಬೇಕು.

ಅನಿವಾರ್ಯ ಕಾರಣಗಳಿಂದ ಏಳುವದು ಸ್ವಲ್ಪ ತಡವಾದರೆ, ಉಳಿದ ಪ್ರಾತಃಸ್ತೋತ್ರ, ಸಂಧ್ಯಾವಂದನೆಗಳನ್ನು ಸಂಕೋಚಗೊಳಿಸಿ (ಬಿಡುವಂತಿಲ್ಲ, ಬೇಗ ಮುಗಿಸಬೇಕು) ಪೂಜೆಯನ್ನೂ ಬೇಗ ಮುಗಿಸಬೇಕು.

ಸರ್ವಥಾ ಸೂರ್ಯೋದಯದ ಒಳಗೆ ದೇವರ ಪೂಜೆ ಮುಗಿಯುವಂತೆ ನೋಡಿಕೊಳ್ಳಬೇಕು.

## ಪೂಜಾ ಸಮಯ

ಧನುರ್ಮಾಸದಲ್ಲಿ ಅರುಣೋದಯದ ಪೂಜೆಯೇ ಮುಖ್ಯ. ಅರುಣೋದಯ ಎಂದರೆ ಸೂರ್ಯೋದಯಕ್ಕಿಂತ ಮುಂಚಿನ 96 ನಿಮಿಷಗಳು. ಅರೋಣೋದಯ ಆರಂಭವಾಗುತ್ತಿದ್ದಂತೆ ಪೂಜೆ ಆರಂಭವಾಗಿ ಅರುಣೋದಯ ಮುಗಿಯುವಷ್ಟರಲ್ಲಿ ದೇವರ ಪೆಟ್ಟಿಗೆಯನ್ನು ಕಟ್ಟಿಟ್ಟು ಬಿಡಬೇಕು.

**ಮುಖ್ಯಾsರುಣೋದಯೇ ಪೂಜಾ**
**ಮಧ್ಯಮಾ ಲುಪ್ತತಾರಕಾ ।**
**ಅಧಮಾ ಸೂರ್ಯಸಹಿತಾ**
**ಮಧ್ಯಾಹ್ನೇ ನಿಷ್ಫಲಾ ಭವೇತ್ ।।**

ಅರುಣೋದಯಕಾಲದ ಪೂಜೆಯೇ ಉತ್ತಮ.

ನಕ್ಷತ್ರಗಳು ಕಾಣೆಯಾಗಲು ಆರಂಭಿಸಿದ ಮೇಲೆ ಪೂಜೆ ಆರಂಭಿಸಿದರೆ ಅದು ಮಧ್ಯಮ. ಕಾರಣ ಅದು ಅರುಣೋದಯ ಕಾಲವಾದರೂ ಸಮಗ್ರ ಪೂಜೆಯನ್ನು ಸೂರ್ಯೋದಯದ ಒಳಗೆ ಮಾಡಲು

ಆಗುವದಿಲ್ಲ. ಮಾಡಿದರೂ ತುಂಬ ಸಂಕ್ಷಿಪ್ತವಾಗಿ ಮಾಡಬೇಕಾಗುತ್ತದೆ.

ಧನುರ್ಮಾಸದಲ್ಲಿ ಸೂರ್ಯೋದಯವಾದ ಮೇಲೆ ಮಾಡುವ ಪೂಜೆ ಅಧಮ.

ಪ್ರತೀನಿತ್ಯ ಮಾಡುವಂತೆ ಮಧ್ಯಾಹ್ನ ಕಾಲದಲ್ಲಿ ಪೂಜೆ ಮಾಡಿದರೆ ಅದು ನಿಷ್ಫಲ.

ಹಾಗಾದರೆ, ಒಂದು ವೇಳೆ ಬೆಳಿಗ್ಗೆ ಪೂಜೆ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಮಧ್ಯಾಹ್ನವೂ ಪೂಜೆ ಮಾಡಬಾರದೆ, ಫಲ ಬರುವದಿಲ್ಲವಲ್ಲ ಎಂದರೆ, ಸರ್ವಥಾ ಮಾಡಲೇಬೇಕು.

ಮಧ್ಯಾಹ್ನ ಪೂಜೆ ಮಾಡಿದರೆ ಪೂಜಾಫಲ ನೀಡುವದಿಲ್ಲ. ಪೂಜೆಯನ್ನೇ ಮಾಡದಿದ್ದರೆ ಪೂಜೆ ಬಿಟ್ಟ ದೋಷ ಬರುತ್ತದೆ. ಗೀತೆ ಹೇಳಿದಂತೆ ಆ ದಿವಸದ ಮಟ್ಟಿಗೆ ಅಘಾಯುಗಳಾಗುತ್ತೇವೆ. ಪಾಪಿಷ್ಠ ಅನ್ನವನ್ನು ತಿಂದಂತಾಗುತ್ತದೆ. ಹೀಗಾಗಿ ಪೂಜೆಯನ್ನು ಬಿಡುವಂತಿಲ್ಲ.

## ಅರುಣೋದಯದ ಪೂಜೆಯೇ ಏಕೆ ಮುಖ್ಯ

ಉತ್ತರ ಅತ್ಯಂತ ಸರಳವಿದೆ.  ನಮ್ಮ ಒಂದು ವರ್ಷ ದೇವತೆಗಳಿಗೆ ಒಂದು ಹಗಲು ರಾತ್ರಿ.

ನಮ್ಮ ದಕ್ಷಿಣಾಯನ ದೇವತೆಗಳಿಗೆ ರಾತ್ರಿ. ನಮ್ಮ ಉತ್ತರಾಯಣ ದೇವತೆಗಳಿಗೆ ಹಗಲು.

ಮಕರಸಂಕ್ರಾಂತಿಯ ದಿವಸ ದೇವತೆಗಳಿಗೆ ಸೂರ್ಯೋದಯ. ಅದಕ್ಕೇ ಸೌರಮಾನ ಮಕರಮಾಸದಿಂದಲೇ ಆರಂಭ. ಚಾಂದ್ರಮಾನಕ್ಕೆ ಚೈತ್ರಮಾಸ ಹೇಗೋ ಹಾಗೆ ಸೌರಮಾನಕ್ಕೆ ಮಕರಮಾಸ ಮೊದಲ ಮಾಸ.

ಸೂರ್ಯೋದಯಕ್ಕಿಂತ ಮುಂಚಿನ 96 ನಿಮಿಷ ಅರುಣೋದಯ. ಅಂದರೆ ಸಮಗ್ರ ಧನುರ್ಮಾಸ ದೇವತೆಗಳಿಗೆ ಅರುಣೋದಯ.

ಅವರಿಗೆ ಅರುಣೋದಯವಾಗಿರುವದರಿಂದ ನಾವು ನಮ್ಮ ಅರುಣೋದಯದಲ್ಲಿ ದೇವರ ಪೂಜೆಯನ್ನು ಮಾಡಿದಾಗ ದೇವತೆಗಳು ಮತ್ತು ಭಗವಂತ ಪೂರ್ಣಾನುಗ್ರಹವನ್ನು ಮಾಡುತ್ತಾರೆ.

## ಧನುರ್ಮಾಸದ ಪೂಜೆ ಮಾಡದಿದ್ದಲ್ಲಿ ದೋಷ

ಧನುರ್ಮಾಸದ ನಿಯಮವೇನೂ ಮಹಾನಿಯಮವಲ್ಲ. ಮಾಡದಿದ್ದರೂ ನಡೆಯುತ್ತದೆ ಎಂದು ಉಡಾಫೆಯಿಂದ ಪೂಜೆಯನ್ನು ಬಿಟ್ಟರೆ ಉಂಟಾಗುವ ಮಹತ್ತರ ದೋಷವನ್ನು ಆಗ್ನೇಯಪುರಾಣ ತಿಳಿಸುತ್ತದೆ —

**ಉಷಃಪೂಜಾಂ ಧನುರ್ಮಾಸೇ**
**ಯೋ ನ ಕುರ್ವೀತ ವೈಷ್ಣವೀಮ್ ।**
**ಸಪ್ತಜನ್ಮಸು ರಿಕ್ತಃ ಸ್ಯಾತ್**
**ಕ್ಷಯರೋಗೀ ಚ ಮೂಢಧೀಃ ।।**

ಧನುರ್ಮಾಸದಲ್ಲಿ ಯಾರು ಉಷಃಕಾಲದಲ್ಲಿ ಶ್ರೀಹರಿಯ ಪೂಜೆಯನ್ನು ಮಾಡುವದಿಲ್ಲವೋ, ಅವರು ಏಳು ಜನ್ಮಗಳಲ್ಲಿ ದರಿದ್ರರಾಗುತ್ತಾರೆ, ಕ್ಷಯರೋಗವನ್ನು ಪಡೆಯುತ್ತಾರೆ ಮತ್ತು ಬುದ್ಧಿಯ ಮಾಂದ್ಯತೆಯನ್ನು ಪಡೆಯುತ್ತಾರೆ.

ಬಿಟ್ಟರೆ ಘೋರ ದುಷ್ಫಲವಿರುವದರಿಂದ ಅವಶ್ಯವಾಗಿ ಪೂಜೆಯನ್ನು ಮಾಡಲೇ ಬೇಕು.

ಇನ್ನು ಪೂಜೆಯನ್ನು ಮಾಡಿ ಹುಗ್ಗಿಯನ್ನು ನೈವೇದ್ಯ ಮಾಡದೇ ಇದ್ದರೂ ಸಹ ದೋಷವನ್ನು ಆಗ್ನೇಯ ಪುರಾಣ ತಿಳಿಸುತ್ತದೆ —

> **ಯಸ್ತು ದಾರಿದ್ರ್ಯಬುದ್ಧ್ಯಾ**
> **ಮುದ್ಗಾನ್ನಂ ನ ನಿವೇದಯೇತ್ ।**
> **ವಿಷ್ಣವೇ ಕಾರ್ಮುಕೇ ಸ್ನಾತಃ**
> **ಸಪ್ತಜನ್ಮಸು ನಿರ್ಧನಃ ।**

ಹೆಸರುಬೇಳೆ, ಅಕ್ಕಿ ಖರ್ಚಾಗುತ್ತದೆ ಎಂದು ಎಂದು ಜಿಪುಣತನದಿಂದ ದೇವರಿಗೆ ಮುದ್ಗಾನ್ನವನ್ನು ನೈವೇದ್ಯ ಮಾಡದೇ ಇದ್ದಲ್ಲಿ, ಅವನು ಉಷಃಕಾಲದಲ್ಲೆದ್ದು ಸ್ನಾನ ಮಾಡಿ ಪೂಜೆ ಮಾಡಿದರೂ ಸಹ ಏಳು ಜನ್ಮಗಳಲ್ಲಿ ದರಿದ್ರನಾಗಿಯೇ ಹುಟ್ಟುತ್ತಾನೆ.

ಹಾಗಾದರೆ, ಮನೆಯಲ್ಲಿ ಅಕ್ಕಿ ಬೇಳೆ ಇಲ್ಲದವರು ಸಾಲ ಮಾಡಿ ತಂದು ದೇವರಿಗೆ ನೈವೇದ್ಯ ಮಾಡಬೇಕೇ,  ಎಂದರೆ ಸರ್ವಥಾ ಹಾಗಿಲ್ಲ.

ಇಲ್ಲಿ “ಯೋ ದರಿದ್ರಃ ನ ನಿವೇದಯೇತ್” ಎಂದು ಹೇಳಿಲ್ಲ, “ಯೋ ದಾರಿದ್ರ್ಯಬುದ್ಧ್ಯಾ ನ ನಿವೇದಯೇತ್” ಎಂದು ಹೇಳಿದ್ದಾರೆ.

ದಾರಿದ್ರ್ಯಬುದ್ಧ್ಯಾ ಎಂದರೆ ದಾರಿದ್ರ್ಯವುಂಟಾಗುತ್ತದೆ, ಖರ್ಚಾಗಿಬಿಡುತ್ತದೆ ಎಂಬ ಆಲೋಚನೆಯಿಂದ ಎಂದರ್ಥ. ದಾರಿದ್ರ್ಯಂ ಭವತೀತಿ ಬುದ್ಧಿಃ ದಾರಿದ್ರ್ಯಬುದ್ಧಿಃ| ತಯಾ |

ಹೀಗಾಗಿ ನಿಜವಾಗಿಯೂ ಮನೆಯಲ್ಲಿ ಅಕ್ಕಿ ಬೇಳೆ ಇಲ್ಲದವರು ಅದನ್ನು ನೈವೇದ್ಯ ಮಾಡದಿದ್ದರೆ ಸರ್ವಥಾ ದೋಷ ಬರುವದಿಲ್ಲ. ತಮಗೆ ತಿನ್ನಲು ಏನಿದೆಯೋ ಅದನ್ನೇ ದೇವರಿಗೆ ನೈವೇದ್ಯ ಮಾಡಿದಲ್ಲಿ ದೇವರು ಪೂರ್ಣಾನುಗ್ರಹ ಮಾಡುತ್ತಾನೆ.

ಮನೆಯಲ್ಲಿ ಪದಾರ್ಥಗಳನ್ನಿಟ್ಟುಕೊಂಡೂ ಖರ್ಚಾಗುತ್ತದೆ ಎಂದು ಮಾಡದಿದ್ದಲ್ಲಿ ಮಾತ್ರ ಸರ್ವಥಾ ದೋಷವುಂಟಾಗುತ್ತದೆ. ಜಿಪುಣತನ ಮಾಡತಕ್ಕದ್ದಲ್ಲ ಎನ್ನುವದು ಪುರಾಣದ ಅರ್ಥ.

# ಪೂಜೆಯ ಅಧಿಕಾರವಿಲ್ಲದವರು ಏನು ಮಾಡಬೇಕು

ಮನೆಯಲ್ಲಿ ಒಬ್ಬರು ಮಾತ್ರ ಪೂಜೆ ಮಾಡಲು ಸಾಧ್ಯ. ಎಲ್ಲರಿಗೂ ಸಾಧ್ಯವಿಲ್ಲ.

ಪೂಜೆಗೆ ಸಹಾಯ ಮಾಡುವದರಿಂದ ಪೂಜೆ ಮಾಡಿದ ಪುಣ್ಯವೇ ದೊರೆಯುತ್ತದೆ. ಎಳ್ಳಷ್ಟೂ ಕಡಿಮೆಯಾಗುವದಿಲ್ಲ.

ಪೂಜೆ ನೋಡುವದರಿಂದಲೂ ಪೂಜೆಯ ಪುಣ್ಯ ಒದಗಿಬರುತ್ತದೆ.

ಪೂಜೆಯನ್ನು ಮಾಡಲು ಸಾಧ್ಯವೇ ಇಲ್ಲದ ಅನಾರೋಗ್ಯ ಮುಂತಾದವಿದ್ದಲ್ಲಿ ಪೂಜಾ ಮಂತ್ರಗಳನ್ನು ಪಠಣ ಮಾಡುವದರಿಂದ ಪೂಜೆಯ ಫಲವನ್ನು ಪಡೆಯುತ್ತೇವೆ.

ದೇವರ ಸ್ತೋತ್ರಗಳನ್ನು, ಭಾಗವತ ಭಾರತ, ಗೀತಾಗಳನ್ನು  ಪಠಿಸುವದು ಪೂಜೆಗಿಂತಲೂ ಮಿಗಿಲಾದ ಪುಣ್ಯವನ್ನು ನೀಡುತ್ತದೆ.

## ಪೂಜೆಯಿಂದ ದೊರೆಯುವ ಫಲಗಳು

ಧನುರ್ಮಾಸದ ಪೂಜೆಯಿಂದ ಶ್ರೀಹರಿ ಪೂರ್ಣ ಪ್ರಸನ್ನನಾಗುತ್ತಾದೆ. ಲೌಕಿಕ ಜೀವನದ ಆಪತ್ತುಗಳ ಪರಿಹಾರ, ಸಾಧನೆಗೆ ಉಪಯೋಗವಾಗುವ ಸಂಪತ್ತಿನ ಪ್ರಾಪ್ತಿಯಿಂದಾರಂಭಿಸಿ, ವೈಷ್ಣವಜನ್ಮಪ್ರಾಪ್ತಿ, ಶುದ್ಧ ಜ್ಞಾನ, ಮೋಕ್ಷದ ವರೆಗೆ ಭಗವಂತ ಅನುಗ್ರಹವನ್ನು ಮಾಡುತ್ತಾನೆ.

ಆಗ್ನೇಯ ಪುರಾಣ ಅವುಗಳಲ್ಲಿ ಕೆಲವನ್ನು ವಿಶೇಷವಾಗಿ ಉಲ್ಲೇಖಿಸುತ್ತದೆ.

### ಶತ್ರುನಾಶ

**ಕೋದಂಡಸ್ಥೇ ದಿವಾನಾಥೇ**
**ಯೋ ಮುದ್ಗಾನ್ನಂ ಸಹಾರ್ದ್ರಕಮ್ ।**
**ನಿವೇದಯೇದ್ ಹರೇಃ ಸಮ್ಯಗ್**
**ಜಿತ್ವಾ ಶತ್ರೂನ್ ಕ್ಷಣೇನ ಸಃ ।।**

ಯಾರಿಗೆ ಮನೆಯಲ್ಲಿ, ಕಾರ್ಯಾಲಯದಲ್ಲಿ, ಸಮಾಜದಲ್ಲಿ ತೊಂದರೆ ಕೊಡುವ ಜನ

ಅಧಿಕರಾಗಿದ್ದಾರೆಯೋ ಅವರು ಧನುರ್ಮಾಸದ ಪೂಜೆಯನ್ನು ಮಾಡಿದಲ್ಲಿ, ಹಸಿಶುಂಠಿಯ ಜೊತೆಯಲ್ಲಿ ಹುಗ್ಗಿಯನ್ನು ಸಮರ್ಪಿಸಿದಲ್ಲಿ, ಎಲ್ಲ ರೀತಿಯ ಶತ್ರುಗಳನ್ನೂ ಕ್ಷಣಮಾತ್ರದಲ್ಲಿ ಗೆಲ್ಲುತ್ತಾರೆ.

ಹೊರಗಿನ ಶತ್ರುಗಳ ಬಗ್ಗೆ ತಲೆ ಕೆಡಿಸಿಕೊಳ್ಳದಷ್ಟು ಎತ್ತರಕ್ಕೇರಿರುವ ಸಜ್ಜನರಿಗೆ ಭಗವಂತ ಒಳಗಿನ ಶತ್ರುಗಳನ್ನು ನಾಶ ಮಾಡುತ್ತಾನೆ.

ಕಾಮಕ್ರೋಧಾದಿಗಳನ್ನು ಗೆಲ್ಲಲು, ನಮ್ಮ ಸಾಧನೆಗೆ, ಬದುಕಿಗೆ, ನೆಮ್ಮದಿಗೆ ಇರುವ ವಿಘ್ನಗಳನ್ನು ಗೆಲ್ಲಲು ಶ್ರೇಷ್ಠವಾದ ಉಪಾಯ ಧನುರ್ಮಾಸದ ಪೂಜೆ.

## ದೀರ್ಘಾಯುಷ್ಯ, ಮಹಾಸಂಪತ್ತು

ಸದಧ್ಯಾರ್ದ್ರಕಮುದ್ಗಾನ್ನಂ
ಯೋ ಧನುರ್ಮಾಸಿ ವಿಷ್ಣವೇ ।
ಸಮರ್ಪಯೇತ್ ಸ ದೀರ್ಘಾಯುಃ
ಧನಾಢ್ಯೋ ವೇದಪಾರಗಃ ||

ಮೊಸರು, ಹಸಿಶುಂಠಿಯ ಸಮೇತವಾಗಿ ಹುಗ್ಗಿಯನ್ನು ಧನುರ್ಮಾಸದಲ್ಲಿ ಶ್ರೀಹರಿಗೆ ಸಮರ್ಪಿಸುವ ಸಾಧಕ ದೀರ್ಘಾಯುಷ್ಯವನ್ನು ಪಡೆಯುತ್ತಾನೆ. ಮಹತ್ತರ ಸಂಪತ್ತನ್ನು ಪಡೆಯುತ್ತಾನೆ. ಮತ್ತು ವೇದಶಾಸ್ತ್ರಗಳ ಜ್ಞಾನವನ್ನು ಪಡೆಯುತ್ತಾನೆ.

ಇದಕ್ಕಿಂತ ಮತ್ತೇನು ಬೇಕು. ಸಾಧನೆ ಮಾಡಲು ಆಯುಷ್ಯ, ಸಾಧನೆಗೆ ಉಪಯೋಗವಾಗುವ ಸಂಪತ್ತು, ಅವೆರಡರಿಂದ ಪಡೆಯುವ ಶ್ರೇಷ್ಠವಾದ ಶಾಸ್ತ್ರ ಜ್ಞಾನ ಇವೆಲ್ಲವೂ ಧನುರ್ಮಾಸದ ಪೂಜೆಯ ಫಲಗಳು.

ಕೇವಲ ಒಂದು ಜನ್ಮಕ್ಕಲ್ಲ ಈ ಸೌಭಾಗ್ಯಗಳು ಪ್ರತೀಜನ್ಮದಲ್ಲಿಯೂ ಲಭಿಸುತ್ತವೆ ಎಂದು ಆಗ್ನೇಯ ಪುರಾಣ ತಿಳಿಸುತ್ತದೆ. —  ಜನ್ಮಜನ್ಮನಿ ವೈಷ್ಣವಃ, ಶ್ರೀಮಾನ್, ಸುಧೀಃ, ಯೋಗೀ ಸ್ಯಾತ್ ।

## ಸಕಲಾಭೀಷ್ಟಗಳ ಪ್ರಾಪ್ತಿ, ಸದಾ ವೈಷ್ಣವಜನ್ಮ

ಯಂಯಂ ಕಾಮಯತೇ ಕಾಮಂ
ತಂತಂ ಪ್ರಾಪ್ಯ ಸುದುರ್ಲಭಮ್ ।
ಸ ಸ್ಯಾದ್ ಯೋಗೀ ಸುಧೀಃ ಶ್ರೀಮಾನ್
ವೈಷ್ಣವೋ ಜನ್ಮಜನ್ಮನಿ ।।

ಇತರರಿಗೆ ಅತ್ಯಂತ ದುರ್ಲಭವಾದ ಅಪೇಕ್ಷೆ-ಗಳನ್ನೂ ಧನುರ್ಮಾಸದ ಪೂಜೆ ಮಾಡುವ ಸಾಧಕ ಹರಿಯ ಅನುಗ್ರಹದಿಂದ ಪಡೆಯುತ್ತಾನೆ.  ಅಷ್ಟೇ ಅಲ್ಲ, ಪ್ರತೀ ಜನ್ಮದಲ್ಲಿಯೂ ವೈಷ್ಣವನಾಗುತ್ತಾನೆ.

ಶ್ರೀಮಾನ್  — ಸಾಧನೆ ಮಾಡಲು ಸಂಪತ್ತನ್ನು ಪಡೆಯುತ್ತಾನೆ.

ಸುಧೀಃ  — ಉತ್ತಮವಾದ ಜ್ಞಾನವನ್ನು ಪಡೆಯುತ್ತಾನೆ.

ಯೋಗೀ — ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳನ್ನು ಅನುಷ್ಠಾನ ಮಾಡುವ ಎತ್ತರವನ್ನು ಮುಟ್ಟುತ್ತಾನೆ.

## ಹರಿಯ ಪ್ರೀತಿ, ಮೋಕ್ಷ

ದಧ್ಯಾರ್ದ್ರಕಂ ಚ ಮುದ್ಗಾನ್ನಂ
ದದ್ಯಾಚ್ಚೈಲಾಗುಡೋಜ್ಜ್ವಲಮ್ ।
ಸುಸುಖೋಷ್ಣಂ ಸಕಂದಂ ಚ
ವಿಷ್ಣವೇ ಯಃ ಸಮರ್ಪಯೇತ್ ।।

ದೃಷ್ಟ್ವಾ ತಚ್ಛುಭಮುದ್ಗಾನ್ನಂ
ಸಂತುಷ್ಟೋ ಭಕ್ತವತ್ಸಲಃ ।
ದದಾತಿ ಸಕಲಾನ್ ಭೋಗಾನ್
ಮೋಕ್ಷಂ ಚ ಜಗದೀಶ್ವರಃ ।।

ಮೊಸರು, ಹಸಿಶುಂಠಿ, ಒಣಶುಂಠಿ (ಸಕಂದಂ) ಗಳ ಜೊತೆಯಲ್ಲಿ ಏಲಕ್ಕಿ ಬೆಲ್ಲಗಳಿಂದ ರುಚಿಯನ್ನು ಪಡೆಯದ, ಹಿತಮಿತವಾಗಿ ಬಿಸಿಯುಳ್ಳ ಹುಗ್ಗಿಯನ್ನು ದೇವರಿಗೆ ಸಮರ್ಪಿಸಿದಲ್ಲಿ, ಈ ಸಣ್ಣ ಸೇವೆಯಿಂದಲೂ ತೃಪ್ತನಾಗುವ ಭಕ್ತವತ್ಸಲನಾದ ಶ್ರೀಹರಿ ಎಲ್ಲ ಅಪೇಕ್ಷೆಗಳನ್ನೂ ಪೂರ್ಣ ಮಾಡುತ್ತಾನೆ ಮತ್ತು ಮೋಕ್ಷದ ಸಾಧನೆಯನ್ನು ನಮ್ಮಿಂದ ಮಾಡಿಸಿ ಮೋಕ್ಷವನ್ನೂ ಕರುಣಿಸುತ್ತಾನೆ.

ಇಷ್ಟು ಶ್ರೇಷ್ಠವಾದ ಕ್ರಮದಲ್ಲಿ ಹರಿಯ ಕಾರುಣ್ಯವನ್ನು ದೊರಕಿಸಿಕೊಡುವ ಮಾಸ ಧನುರ್ಮಾಸ.

ಕೇವಲ, ಸ್ನಾನ, ಪೂಜೆ, ನೈವೇದ್ಯ ಸ್ತೋತ್ರಗಳಿಂದ ಇಷ್ಟು ಮಹತ್ತರವಾದ ಅನುಗ್ರಹವನ್ನು ಮಾಡುವ ಶ್ರೀಹರಿಯ ಕಾರುಣ್ಯವನ್ನು ತಪ್ಪದೇ ನೆನೆಯುತ್ತ,

ಶ್ರೀಮದಾಚಾರ್ಯರು ತಿಳಿಸಿದ ಕ್ರಮದಲ್ಲಿ ಶ್ರೀಹರಿಯ ಚಿಂತನೆ, ಪೂಜೆಗಳನ್ನು ಮಾಡುತ್ತ,

ಭಾರತ, ಭಾಗವತಾದಿ ಶಾಸ್ತ್ರಗಳ ಚಿಂತನೆಯನ್ನು ಮಾಡುತ್ತ,

ಆಚಾರ್ಯರ ಪರಿಶುದ್ಧ ಪರಂಪರೆಗಳಲ್ಲಿ ಬಂದ ಮಹನೀಯಚರಣರನ್ನು ಬಿಡದೆ ನೆನೆಯುತ್ತ ಧನುರ್ಮಾಸವನ್ನು ಸಾರ್ಥಕ ಮಾಡಿಕೊಳ್ಳೋಣ.

ನಿಮ್ಮಿಂದ ಶ್ರೇಷ್ಠವಾದ ಕ್ರಮದಲ್ಲಿ ಧನುರ್ಮಾಸದ ಪೂಜೆ ನಡೆಯಲಿ ಎಂಬ ಹಾರೈಕೆಯೊಂದಿಗೆ,

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491